

## ಲವ್‌ಲೆಸ್

ಇದೊಂದು ದುರಂತ ರಷ್ಯನ್ ಕಥೆ. ಪತಿ– ಪತ್ನಿ ಪರಸ್ಪರ ಸಿಟ್ಟಿಗೆದ್ದು ಪ್ರತ್ಯೇಕವಾಗಿ ಜೀವಿಸುತ್ತಿದ್ದಾರೆ. ಇಬ್ಬರ ನಡುವಣ ಜಗಳ ವಿಚ್ಛೇದನದ ಹಂತಕ್ಕೆ ತಲುಪಿದೆ. ಇಬ್ಬರೂ ಬೇರೆ ಸಂಗಾತಿಗಳನ್ನು ಹುಡುಕುತ್ತಿದ್ದಾರೆ. ಈ ದಂಪತಿಯ 12ರ ಹರೆಯದ ಮಗ ಅಲೆಕ್ಸಿ ತಂದೆ ತಾಯಿಯ ಜಗಳದ ಬಲಿಪಶುವಾಗಿ ಅಮ್ಮನ ಜತೆಗೆ ಬೆಳೆಯುತ್ತಿದ್ದಾನೆ. ಒಬ್ಬಂಟಿತನ ಅವನನ್ನು ಕಾಡುತ್ತಿದೆ. ಶಾಲೆ ಬಿಟ್ಟ ಬಳಿಕ ಯಾವತ್ತೂ ನೇರ ದಾರಿಯಲ್ಲಿ ಮನೆಗೆ ಹಿಂತಿರುಗುವುದಿಲ್ಲ ಆತ. ಬದಲಾಗಿ ನದೀ ತೀರದ ಮರಗಳು ನಡುವಣ ದಾರಿಯೊಂದರಲ್ಲಿ ನಿಧಾನಕ್ಕೆ ಮರಳುತ್ತಾನೆ.

ಹೀಗಿರುವಾಗ ಒಂದು ದಿನ ಅಲೆಕ್ಸಿ ನಾಪತ್ತೆಯಾಗುತ್ತಾನೆ. ತಾಯಿ ಪೊಲೀಸರಿಗೆ ದೂರು ನೀಡುತ್ತಾಳೆ. ಮೊದಲೆರಡು ದಿನ ಓಡಿಹೋಗುವ ಹುಡುಗ ಮರಳಿ ಮನೆಗೆ ಬರುತ್ತಾನೆಂಬ ಉಡಾಫೆಯಲ್ಲಿ ಪೊಲೀಸರು ಸುಮ್ಮನಿರುತ್ತಾರೆ. ಆದರೆ ಬಳಿಕ ಆ ಹುಡುಗನನ್ನು ಹುಡುಕಲು ಸಂಬಂಧಿಕರ ಮನೆಗಳನ್ನೆಲ್ಲ ತಡಕಾಡುತ್ತಾರೆ. ಈ ಮಧ್ಯೆ ಕಾಣೆಯಾದ ಮಗ ಅಪ್ಪ– ಅಮ್ಮ ಇಬ್ಬರನ್ನೂ ಸಮೀಪಕ್ಕೆ ತರುತ್ತಾನೆ. ಇಬ್ಬರೂ ಜತೆಯಾಗಿ ಹುಡುಕಾಟದಲ್ಲಿ ತೊಡಗುತ್ತಾರೆ. ಎಲ್ಲೂ ಕಾಣಸಿಗದಾಗ ಪೊಲೀಸರು ಅಪ್ಪ– ಅಮ್ಮನನ್ನು, ವಿಳಾಸ ಸಿಗದ ಬಾಲಕನ ಶವವೊಂದನ್ನು ಇಟ್ಟಿದ್ದ ಶವಾಗಾರಕ್ಕೆ ಕರೆದೊಯ್ಯುತ್ತಾರೆ. ಇಡೀ ಸಿನಿಮಾದ ಹೈಲೈಟ್ ದೃಶ್ಯ ಇಲ್ಲಿದೆ. ಆದರೆ ಇಬ್ಬರೂ ಇದು ತಮ್ಮ ಮಗನಲ್ಲ ಎಂದು ಸ್ಪಷ್ಟವಾಗಿಯೇ ಹೇಳುತ್ತಾರೆ. ಕಥೆಯ ಕೊನೆಗೂ ಕಣ್ಮರೆಯಾದ ಹುಡುಗ ಸಿಗುವುದಿಲ್ಲ.

ಚಿತ್ರದ ನಿರ್ದೇಶಕ ಆ್ಯಂಡ್ರೆ ಜೆಗಿನೆಟ್ಸೆವ್ ಬಗ್ಗೆ ರಷ್ಯನ್ ಸರ್ಕಾರಕ್ಕೆ ಅಂತಹ ಸಮಾಧಾನವೇನೂ ಇಲ್ಲ. ಆತ ನಿರ್ದೇಶಿಸಿದ 2014ರ ಸಿನಿಮಾ ‘ಲೆವಿಯಥನ್’ ಬಿಡುಗಡೆಗೆ ಸರ್ಕಾರ ಅನುಮತಿ ನೀಡಿಲ್ಲ. ‘ಲವ್‌ಲೆಸ್’ ಚಿತ್ರೀಕರಣ ಮಾಸ್ಕೊದಲ್ಲಿ ನಡೆಸಬೇಕು ಎಂದಾಗಲೂ ಸರ್ಕಾರ ಅನುಮತಿ ನಿರಾಕರಿಸಿತ್ತು. ಆದರೆ ಅಂತರರಾಷ್ಟ್ರೀಯ ಒತ್ತಡದ ಹಿನ್ನೆಲೆಯಲ್ಲಿ ಕೊನೆಗೂ ಅನುಮತಿ ನೀಡಿತ್ತು.



## ದಿ ಸ್ಕ್ವೇರ್

ಮ್ಯೂಸಿಯಂ ಕ್ಯುರೇಟರ್ ಕ್ರಿಶ್ಚಿಯನ್ ಎಂಬಾತನ ಬದುಕಿನ ಸುತ್ತ ನಡೆಯುವ ಚಿತ್ರ ವಿಚಿತ್ರ ಘಟನೆಗಳ ಅಸಂಗತ ಡ್ರಾಮಾ ಇದು. ಮನುಷ್ಯನ ಕ್ರೌರ್ಯ ಮತ್ತು ಭಯ ಹೇಗೆ ನಾಟಕೀಯವಾಗಿರುತ್ತದೆ ಎನ್ನುವುದನ್ನು ಮ್ಯೂಸಿಯಂನ ಪ್ರದರ್ಶನಗಳನ್ನು ತೋರಿಸುತ್ತಲೇ ಸೂಚಿಸುವ ಚಿತ್ರ. ಸ್ಟಾಕ್‌ಹೋಂ ಮ್ಯೂಸಿಯಂನ ಕ್ಯುರೇಟರ್ ಪಾತ್ರದಲ್ಲಿ ಕ್ಲಾಸ್ ಬ್ಯಾಂಗ್‌ನ ನಟನೆ ಮತ್ತು ಛಾಯಾಗ್ರಾಹಕ ಫ್ರೆಡ್ರಿಕ್ ವೆಂಜೆಲ್‌ನ ಕೈಚಳಕ ಸಿನಿಮಾವನ್ನು ಮರೆಯಲಾಗದಂತೆ ಮಾಡುತ್ತದೆ. ಕಲಾಪ್ರದರ್ಶನವನ್ನು ಮಂಡಿಸುತ್ತಲೇ ಕಲಾಲೋಕದ ವಿಡಂಬನೆ ನಡೆಸುವ ಅಸಂಗತ ತಂತ್ರ ನಿರ್ದೇಶಕ ಫ್ರೆಡ್ರಿಕ್ ವೆಂಜೆಲ್‌ನ ಪ್ರೌಢಿಮೆಗೂ ಕನ್ನಡಿ ಹಿಡಿಯುತ್ತದೆ. ಒಂದು ಹಂತದಲ್ಲಿ ಷೋ